# 'ಶುದ್ಧಭಕ್ತಿಯ ಕೊಡಲು ಹಿಂಜರಿಯುವ'

ಮೂಲ ಹಿಂದೀ : **ಸ್ವಾಮಿ ಬ್ರಹ್ಮೇಶಾನಂದ** ಅನುವಾದ : **ಮಾತಾ ತ್ಯಾಗಮಯೀ**

**ಭ**ಗವಂತನನ್ನು ಪಡೆಯಲು ಭಕ್ತಿಯು ಸಹಜ, ಸರಳ ಮತ್ತು ಉಪಾಯವೆಂದು ಪರಿಗಣಿಸಲಾಗಿದೆ. ಕಲಿಯುಗದಲ್ಲಿ ನಾರದೀಯ ಭಕ್ತಿಯೇ ಸುಲಭ ಮಾರ್ಗ ಎಂಬುದು ಶ್ರೀರಾಮಕೃಷ್ಣರ ಅಭಿಮತ. ಜ್ಞಾನಯೋಗ ಸಾಧನೆಗೆ ವಿವೇಕ, ವೈರಾಗ್ಯ, ಶಮಾದಿ ಷಟ್‌ಸಂಪತ್ತಿನಿಂದ ಕೂಡಿದ ಉತ್ತಮ ಅಧಿಕಾರಿಯು ಇರಬೇಕು. ರಾಜಯೋಗ ಸಾಧನೆ ಸಫಲವಾಗಲು ಯಮ-ನಿಯಮಾದಿಗಳ ಸಾಧನೆ ಬೇಕಾಗುತ್ತದೆ. ಆದರೆ ಭಕ್ತಿಗೆ ಈ ಬಗೆಯ ಪೂರ್ವ ತಯಾರಿಗಳ ಆವಶ್ಯಕತೆಯಿಲ್ಲ. ಒಬ್ಬ ದುರಾಚಾರಿಯಾಗಿದ್ದರೂ, ನೀಚ ಕುಲದಲ್ಲಿ ಜನಿಸಿದ ಅವಿದ್ಯಾವಂತನಾಗಿದ್ದರೂ, ಅವನು ಬಯಸಿದರೆ ಭಕ್ತನಾಗಬಲ್ಲನು. ಈ ಮಾತನ್ನು ಭಗವಂತನೇ ಗೀತೆಯಲ್ಲಿ ಹೇಳಿರುವನು. ಸಂತಮಹಾತ್ಮರ ಜೀವನ, ಸಾಹಿತ್ಯದಲ್ಲಿ ವಾಲ್ಮೀಕಿ, ಅಜಾಮಿಳ, ಪಿಂಗಳಾ, ಗಣಿಕಾ ಮತ್ತಿತರ ಇಂತಹ ಭಕ್ತರ ಉದಾಹರಣೆಗಳೂ ಸಿಗುತ್ತದೆ. ಇದರ ಅರ್ಥ ಭಕ್ತಿ ಸಾಧನೆಯ ಬಾಗಿಲು ಆಬಾಲವೃದ್ಧರಾಗಿ, ಬ್ರಾಹ್ಮಣ-ಶೂದ್ರ, ಧನಿಕ-ನಿರ್ಧನಿ, ವಿದ್ವಾಂಸ-ಮೂರ್ಖ ಎಲ್ಲರಿಗೂ ತೆರೆದಿದೆ.

ಆದರೆ ಭಕ್ತಿ ನಿಜವಾಗಿಯೂ ಅಷ್ಟು ಸುಲಭವೇನು? ಶ್ರೀಮಾತೆಯವರು ಹೇಳುತ್ತಾರೆ, ಭಗವಂತ ಬೇಕಾದರೆ ಮುಕ್ತಿಪದವನ್ನು ನೀಡುತ್ತಾನಂತೆ, ಆದರೆ ಶುದ್ಧಭಕ್ತಿಯನ್ನು ನೀಡಲು ಹಿಂಜರಿಯುತ್ತಾನೆ. ಏಕೆಂದರೆ ಅವನು ಶುದ್ಧಭಕ್ತಿಯನ್ನು ನೀಡಿದರೆ ತಾನೇ ಅಂತಹ ಭಕ್ತನಿಗೆ ಅಧೀನನಾಗಿ ಬಿಡುತ್ತಾನೆ. ಸ್ವಾಮಿ ವಿವೇಕಾನಂದರು ಗೀತಾಚಾರ್ಯ ಶ್ರೀಕೃಷ್ಣನಿಗಿಂತ ಗೋಪೀಜನವಲ್ಲಭ ಶ್ರೀಕೃಷ್ಣನು ಉನ್ನತ ಎಂದು ಬಗೆದಿದ್ದರೂ ಆ ಕುರಿತಾಗಿ ಬೋಧನೆ-ಪ್ರಚಾರವನ್ನು ಮಾಡುತ್ತಿರಲಿಲ್ಲ. ಶ್ರೀರಾಮಕೃಷ್ಣರ ಅಂತರಂಗ ಶಿಷ್ಯರಾದ ಪ್ರೇಮದ ಅವತಾರ ಸ್ವಾಮಿ ಪ್ರೇಮಾನಂದರು ಸ್ವಾಮಿ ವಿವೇಕಾನಂದರು ಸಾರಿ ಹೇಳಿದ ಜೀವಶಿವಸೇವೆಯನ್ನು ಪ್ರಚಾರ ಮಾಡಿದರೇ ಹೊರತು ಪ್ರೇಮಾಭಕ್ತಿಯನ್ನಲ್ಲ. ಒಮ್ಮೆ ಅವರಿಗೆ ಭಕ್ತಿಯನ್ನು ಕುರಿತು ಮಾತನಾಡಲು ಹೇಳಲಾಯಿತು. ಆಗ ಅವರು, ''ಭಕ್ತಿಯನ್ನು ಕುರಿತು ಮಾತನಾಡಲು ಇಲ್ಲಿ ಯಾರೂ ಅಧಿಕಾರಿ ಇಲ್ಲ. ಭಕ್ತಿಗಾಗಿ ವ್ಯಕ್ತಿ ತನ್ನ ಸರ್ವಸ್ವವನ್ನು, ತನ್ನ ಪ್ರಾಣವನ್ನೇ ಕೊಡಲು ಸಿದ್ಧನಾಗಿರಬೇಕಾಗುತ್ತದೆ'' ಎಂದು ನುಡಿದರು.

ಪ್ರತಿಯೊಬ್ಬ ವ್ಯಕ್ತಿ ಪ್ರೀತಿಸುವುದನ್ನು ಬಲ್ಲನು. ಈ ಅರ್ಥದಲ್ಲಿ ಭಕ್ತಿ ಸುಲಭವಾದುದು. ಪ್ರತಿಯೊಬ್ಬನೂ ಒಂದಲ್ಲ ಒಂದು ವಸ್ತುವನ್ನು, ಒಂದಲ್ಲ ಒಂದು ವ್ಯಕ್ತಿಯನ್ನು ಪ್ರೀತಿಸುತ್ತಾನೆ. ಆದರೆ ಭಕ್ತಿ ದುರ್ಲಭವಾದುದೇಕೆಂದರೆ ನೋಡಲಾಗದ, ಅರಿಯಲಾಗದ ಅವ್ಯಕ್ತ ಭಗವಂತನನ್ನು ಪ್ರೀತಿಸುವುದು ಬಹಳ ಕಷ್ಟವಿದೆ. ಇನ್ನು ಭಗವತ್ ಸಾಕ್ಷಾತ್ಕಾರಕ್ಕೆ ಯಾವ ಪರಿಪೂರ್ಣ ನಿಸ್ವಾರ್ಥ ಪ್ರೇಮ ಬೇಕೋ ಅದನ್ನು ಪಡೆಯುವುದು ಮತ್ತೂ ಕಠಿಣ. ಪ್ರೇಮದ ಸ್ವರೂಪವನ್ನರಿತಾಗ ಇದು ನಮಗೆ ಸ್ಪಷ್ಟವಾಗುತ್ತದೆ.

## ಪ್ರೇಮದ ಅರ್ಥ ಮತ್ತು ಪ್ರೇಮದ ಪ್ರಕಾರಗಳು

ಪ್ರೇಮ ಎಂದರೇನು? **ಪ್ರಿಯಸ್ಯ ಭಾವಮ್** – ಪ್ರಿಯತ್ವದೊಂದಿಗಿನ ಸಂಬಂಧವನ್ನು ಪ್ರೇಮ ಎನ್ನುತ್ತಾರೆ. ನನಗೆ ಸುಖ ನೀಡುವ ವಸ್ತು ಅಥವಾ ವ್ಯಕ್ತಿ ನನಗೆ ಪ್ರಿಯನು. ಅವನ ಕುರಿತಾದ ನನ್ನ ಭಾವನೆಯನ್ನೇ ಪ್ರೇಮ ಎನ್ನಲಾಗಿದೆ. ನಮಗೆ ಸುಖ ನೀಡುವ ಜಡವಸ್ತುಗಳು — ಒಂದು ಬಟ್ಟೆ, ಪುಸ್ತಕ, ಗಡಿಯಾರ, ಕಾರು, ಪ್ರಕೃತಿ ದೃಶ್ಯ — ನಮಗೆ ಪ್ರಿಯವಾದವುಗಳು. ನಾವು ಅದನ್ನು ಪ್ರೀತಿಸುತ್ತೇವೆ. ಇಲ್ಲಿ ಪ್ರೀತಿಸುವ ವ್ಯಕ್ತಿಯ ಸುಖವನ್ನೇ ಪ್ರಧಾನ ಮಾನದಂಡವಾಗಿ ತೆಗೆದುಕೊಳ್ಳಲಾಗಿದೆ. ಜಗತ್ತಿನಲ್ಲಿ ನಾವು ಈ ಬಗೆಯ ಪ್ರೀತಿಯನ್ನೇ ನೋಡುತ್ತೇವೆ. ಸ್ತ್ರೀ-ಪುರುಷರ ಆಕರ್ಷಣೆ, ವಿವಾಹ ಮತ್ತು ಬಳಿಕ ಅವರ ವಿಚ್ಛೇದನದಲ್ಲೂ ನಾವು ಈ ಬಗೆಯ ಸ್ವಕೇಂದ್ರಿತ, ಸ್ವಸುಖ ಕೇಂದ್ರಿತ ಪ್ರೇಮವನ್ನೇ ನೋಡುತ್ತೇವೆ.

ಇದನ್ನೇ ಗಮನದಲ್ಲಿಟ್ಟುಕೊಂಡು ಉಪನಿಷತ್ಕಾರರು ಹೇಳುತ್ತಾರೆ, ಪತಿಗಾಗಿ ಪತಿ ಪ್ರಿಯನಾಗುವುದಿಲ್ಲ, ಆತ್ಮನಿಗಾಗಿ ಪತಿ ಪ್ರಿಯನಾಗುತ್ತಾನೆ. ಒಬ್ಬ ಪತ್ನಿಗಾಗಿ ಪತ್ನಿ ಪ್ರಿಯಳಾಗುವುದಿಲ್ಲ, ತನಗಾಗಿ ಪ್ರಿಯಳಾಗುತ್ತಾಳೆ: '**ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ, ಆತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ.**'

ಈ ಎಲ್ಲ ಪ್ರೇಮಗಳಲ್ಲಿ ಸ್ವಾರ್ಥವೇ ಪ್ರಧಾನವಾಗಿರುತ್ತದೆ. ತಂದೆ ಮಗುವನ್ನು ಮಡಿಲಲ್ಲೆತ್ತಿಕೊಂಡು ಮುದ್ದಿಸುತ್ತಾನೆ, ತಂದೆಯ ಗಡ್ಡದ ಕೂದಲು ತಾಗಿ ಮಗು ಅಳುತ್ತದೆ. ಆದರೆ ತಂದೆಗೆ ಮಗುವನ್ನು ಪ್ರೀತಿಸುವಲ್ಲಿ ಸುಖ ಸಿಗುತ್ತದೆ. ಅವನು ಅದನ್ನು ಬಿಡುವುದಿಲ್ಲ. (ಪಾಶ್ಚಾತ್ಯ ಮನೋವಿಜ್ಞಾನದ ದೃಷ್ಟಿಯಿಂದ ಇದನ್ನು ಕಾಮ ಎಂದು ಕರೆದರೂ ತಪ್ಪೇನು?) 'ಪಂಚದಶೀ'ಕಾರರಾದ ಸ್ವಾಮಿ ವಿದ್ಯಾರಣ್ಯರು ಈ ಉದಾಹರಣೆಯನ್ನು ಕೊಡುತ್ತಾರೆ. ಕೆಲವೊಮ್ಮೆ ಹಿರಿಯರಿಗೆ ಮಕ್ಕಳನ್ನು ಅಳಿಸಿ, ಬಳಿಕ ಅವನ್ನು ಮಡಿಲಲ್ಲೆತ್ತಿಕೊಂಡು ಮುದ್ದಿಸಿದರೆ ಆನಂದ ಸಿಗುತ್ತದೆ. ಪ್ರೀತಿಪಾತ್ರನಿಗೆ ತೊಂದರೆ ಕೊಟ್ಟು, ಆನಂದಿಸುವುದು ಒಂದು ಬಗೆಯ ವಿಕೃತ ಮನಸ್ಥಿತಿಯನ್ನು ತೋರಿಸುತ್ತದೆ.

ಪ್ರೇಮದ ಎರಡನೆಯ ಹಂತದಲ್ಲಿ ಪ್ರೇಮಿಯು ತನ್ನ ಪ್ರೀತಿ ಪಾತ್ರನಿಗೆ ಸುಖ ನೀಡಲು ಬಯಸುತ್ತಾನೆ, ತಾನೂ ಸುಖವನ್ನು ಪಡೆಯಬಯಸುತ್ತಾನೆ. ತಾಯಿ ಮಗುವನ್ನು ಕಂಡು ಸಂತೋಷ ಪಡುತ್ತ ಅದನ್ನು ಸಂತೋಷಪಡಿಸಲು ಎಲ್ಲ ರೀತಿಯಿಂದ ಪ್ರಯತ್ನಿಸುತ್ತಾಳೆ. ಮಗುವಿಗೆ ದುಃಖವಾದರೆ ತಾಯಿಗೂ ದುಃಖವಾಗುತ್ತದೆ, ಅಲ್ಲೂ ಸ್ವಾರ್ಥದ ಗಂಧ ಇದೆ. ಮಗ ದೊಡ್ಡವನಾಗಿ ತನ್ನನ್ನು ನೋಡಿಕೊಳ್ಳಲಿ ಎಂದು ತಾಯಿಯ ಆಸೆ. 'ಈ ಜಗತ್ತಿನಲ್ಲಿ ಯಾರು ಯಾರಿಗೂ ಸೇರಿದವರಲ್ಲ, ಎಲ್ಲರೂ ಪರಕೀಯರೇ,' ಎಂಬುದು ಈ ಬಗೆಯ ಸ್ವಾರ್ಥ ಕೌಟುಂಬಿಕ ಪ್ರೀತಿಗಳನ್ನು ಧಿಕ್ಕರಿಸಲು ಹೇಳಲಾದ ಮಾತು. ಸಂಸಾರಿಗಳು ವೈರಾಗ್ಯಶೀಲರಾಗಲೆಂದು ಶ್ರೀರಾಮಕೃಷ್ಣರು ಇದನ್ನು ಬೇರೆ ಬೇರೆ ಕಥೆಗಳು ಮತ್ತು ದೃಷ್ಟಾಂತಗಳ ಮೂಲಕ ಹೇಳುತ್ತಾರೆ. ತನ್ನ ಪಾಪದಲ್ಲಿ ತನ್ನ ಕುಟುಂಬದ ಯಾರೂ ಪಾಲು ಹಂಚಿಕೊಳ್ಳಲು ಸಿದ್ಧರಿಲ್ಲ ಎಂದು ಗೊತ್ತಾಗುತ್ತಲೇ ರತ್ನಾಕರನು ವೈರಾಗ್ಯ ತಾಳಿ ವಾಲ್ಮೀಕಿಯಾದನು.

ಕೌಟುಂಬಿಕ ಸಂಬಂಧಗಳೆಲ್ಲ ಸ್ವಾರ್ಥಪೂರ್ಣವಾದವುಗಳೆಂದೇನೂ ಅಲ್ಲ. ಕೆಲವು ಅಪವಾದಗಳೂ ಇವೆ. ತನ್ನ ಪ್ರೀತಿಪಾತ್ರರಿಗೆ ಸುಖನೀಡಲು ಎಂತಹ ತ್ಯಾಗವನ್ನು ಮಾಡುವವರೂ ಇದ್ದಾರೆ, ಇಂತಹ ಪ್ರೀತಿಯಲ್ಲಿ ಸ್ವಾರ್ಥ ಮತ್ತ ಆಸಕ್ತಿ ಲೇಶಮಾತ್ರವೂ ಇರುವುದಿಲ್ಲ. ಒಬ್ಬ ತಂದೆಗೆ ವೃದ್ಧಾಪ್ಯದಲ್ಲಿ ಒಬ್ಬನೇ ಮಗನು ಹುಟ್ಟಿದನು. ತಂದೆ ದಿನವಿಡೀ ಮಗನ ಪಾಲನೆ-ಪೋಷಣೆಯಲ್ಲೇ ಕಳೆಯುತ್ತಿದ್ದನು. ಮಗನಿಗೆ ಸ್ನಾನ ಮಾಡಿಸುವುದು, ಊಟ ಮಾಡಿಸುವುದು, ಅವನೊಂದಿಗೆ ಆಟವಾಡುವುದು ಇತ್ಯಾದಿ. ರಾತ್ರಿ ಮಗ ಮಲಗಿದಾಗ ತಂದೆ ಅವನನ್ನು ಕಾವಲು ಕಾಯುತ್ತಿದ್ದನು. ಆ ಮಗ ವೃದ್ಧ ಪಿತನ ಸರ್ವಸ್ವವಾಗಿದ್ದನು, ಅವನ ಪ್ರೇಮದ ಕೇಂದ್ರವಾಗಿದ್ದನು. ಅವನ ೧೫ನೆ ವಯಸ್ಸಿಗೆ ಅವನಿಗೆ ಇದ್ದಕ್ಕಿದ್ದಂತೆ ಕಾಯಿಲೆ ಬಂದಿತು. ತಂದೆ ಮಗನ ಚಿಕಿತ್ಸೆಗೆ ಎಲ್ಲ ವ್ಯವಸ್ಥೆಯನ್ನು ಮಾಡಿಯೂ ಯಾವ ಉಪಯೋಗವೂ ಆಗಲಿಲ್ಲ. ಮಗನ ಅಂತಿಮ ಗಳಿಗೆಯಲ್ಲಿ ತಂದೆ ''ನಿನಗೆ ಇಷ್ಟು ವರ್ಷಗಳು ಏನೂ ಅನಾನುಕೂಲವಾಗಲಿಲ್ಲ ತಾನೆ?'' ಎಂದು ಕೇಳಿದನು. ಮಗ ಕಂಬನಿದುಂಬಿ, ''ಇಲ್ಲ, ನನಗೇನೂ ತೊಂದರೆಯಾಗಿಲ್ಲ'' ಎಂದು ಒಪ್ಪಿಕೊಂಡನು. ಮಗ ತೀರಿಕೊಂಡನು. ತಂದೆಯೂ ಇನ್ನು ಹೆಚ್ಚು ದಿನ ಬದುಕಲಾರನು ಎಂದು ಎಲ್ಲರೂ ಭಾವಿಸಿದರು. ಆದರೆ ಆಶ್ಚರ್ಯವೇನೆಂದರೆ ತಂದೆಗೆ ಮಗನ ಮರಣಶೋಕ ಕಾಡಲಿಲ್ಲ. ಅವನು ಎಂದಿನಂತೆ ಇದ್ದನು.

ಸ್ವಾರ್ಥ, ಆಸಕ್ತಿ ಮತ್ತು ಫಲಾಪೇಕ್ಷೆಯಿಲ್ಲದ ಈ ಬಗೆಯ ಪ್ರೇಮ ಬಹಳ ಅಪರೂಪ. ತಾಯಿ, ತಂದೆ ಮಕ್ಕಳು ಪರಸ್ಪರ ನಿಸ್ವಾರ್ಥರಾಗಿದ್ದು ಕರ್ತವ್ಯಭಾವನೆಯಿಂದ ಸೇವೆಯನ್ನೇನೋ ಮಾಡುತ್ತಾರೆ. ಆದರೆ ಕರ್ತವ್ಯದೊಂದಿಗೆ ಪ್ರೇಮವಿಲ್ಲದಿದ್ದರೆ ಅದು ಭಾರವಾಗುತ್ತದೆ. ಕರ್ತವ್ಯವನ್ನು ಕರ್ಮ ಎನ್ನುವುದಾದರೆ ಪ್ರೇಮ ಅದನ್ನು ರಸಮಯವಾಗಿಸುವ ಭಾವ. ತನ್ನ ಪ್ರೀತಿಪಾತ್ರನಿಗೆ ಕರ್ಮಸುಖವನ್ನು ನೀಡುವ ಆಸೆ, ಅವನ ಶ್ರೇಯೋಭಿಲಾಷೆಯೇ ಪ್ರೇಮ.

### ಭಗವತ್ಪ್ರೇಮ ಬಹಳ ಕಠಿಣ

ಮನುಷ್ಯನಿಗೆ ಅವ್ಯಕ್ತ , ಅದೃಶ್ಯನಾದ ಭಗವಂತನನ್ನು ಪ್ರೀತಿಸಲು ಬರುವುದಿಲ್ಲ ಎಂಬುದೇ ಸಮಸ್ಯೆ. ಸ್ಥೂಲವಾದ ಕಣ್ಣಿಗೆ ಕಾಣುವ ಜಡ ಅಥವಾ ಚೇತನ ವಸ್ತುವನ್ನು, ವ್ಯಕ್ತಿಯನ್ನು ಇವನು ಪ್ರೀತಿಸಬಲ್ಲ. ಆದರೆ ಕಾಣದ ಭಗವಂತನನ್ನು ಪ್ರೀತಿಸುವುದು ಹೇಗೆ? ಹುಟ್ಟಿನಿಂದಲೇ ಭಗವಂತನನ್ನು ಪ್ರೀತಿಸುವ ಶುಭ ಸಂಸ್ಕಾರ ಸಂಪನ್ನ ಬಾಲಕರನ್ನು ಬಿಟ್ಟು ಉಳಿದ ಎಲ್ಲರದೂ ಇದೇ ಸಮಸ್ಯೆ. ಭಕ್ತರ, ಸಂಸ್ಕಾರವಂತರ ಮನೆಗಳಲ್ಲಿ ಹುಟ್ಟಿದ ಮಕ್ಕಳಿಗೆ ಬಾಲ್ಯದಲ್ಲಿ ಭಗವಂತನಲ್ಲಿ ಮುಗ್ಧ ಭಕ್ತಿ ಇರುತ್ತದೆ, ಆದರೆ ವಯಸ್ಸು ಬೆಳೆದಂತೆ, ಅವರ ಬೌದ್ಧಿಕ ವಿಕಾಸದೊಂದಿಗೆ ಭಕ್ತಿ ಕ್ಷೀಣವಾಗುತ್ತ ಹೋಗಿ ಹೆಸರಿಗಷ್ಟೇ ಉಳಿದುಕೊಳ್ಳುತ್ತದೆ. ಆದರೂ ಭಗವಂತ ಇದ್ದಾನೆ, ಅವನನ್ನು ಪ್ರೀತಿಸಬೇಕು, ಅವನೂ ಪ್ರತಿಯಾಗಿ ನಮ್ಮನ್ನು ಪ್ರೀತಿಸುತ್ತಾನೆ ಎಂಬ ನಂಬಿಕೆಯು ಭಕ್ತಿಯ ಬೆಳವಣಿಗೆಗೆ ಬಹಳ ಸಹಾಯ ಮಾಡುತ್ತದೆ. ಈ ನಂಬಿಕೆಯಿಲ್ಲದೆ ಭಕ್ತನಾಗಲು ಸಾಧ್ಯವೂ ಇಲ್ಲ.

### ಭಕ್ತಿಯ ಸ್ತರಗಳು

ಭಕ್ತಿಯು ಯಾವುದೇ ಮೂರ್ತಿ, ಭಾವಚಿತ್ರ ಅಥವಾ ಪ್ರತೀಕದ ಸಕಾಮ ಪೂಜೆಯಿಂದಲೇ ಆರಂಭವಾಗುತ್ತದೆ. ದಂಭದಿಂದ ಕೂಡಿದ ವಿಧಿಹೀನ, ಮಂತ್ರಹೀನ ಪೂಜೆಯು ತಾಮಸ ಪೂಜೆ ಎಂದು ಕರೆಯಲ್ಪಡುತ್ತದೆ. ಭಗವಂತನಿಗೆ ಅವನು ಸಾಮಾನ್ಯ ಮಟ್ಟದ ವಸ್ತ್ರ, ಹಣ್ಣು ಇತ್ಯಾದಿಗಳನ್ನು ಅರ್ಪಿಸುತ್ತಾರೆ. ಎಂದರೆ ಅವನಿಗೆ ತಾನು ಪೂಜಿಸುವ ಮೂರ್ತಿ ತನ್ನ ಇಷ್ಟದ ಪ್ರತೀಕ, ಅದರಲ್ಲಿ ತನ್ನ ಇಷ್ಟದ ಆವಿರ್ಭಾವವಾಗಿದೆ ಎಂಬ ನಂಬಿಕೆ ಇಲ್ಲ ಎಂದರ್ಥ.

ಇದಕ್ಕಿಂತ ಮುಂದಿನ ಸ್ತರದ ಪೂಜೆಯಲ್ಲಿ ಭಕ್ತ ತನಗೆ ಅತ್ಯಂತ ಪ್ರಿಯವಾದ ವಸ್ತುಗಳನ್ನು ಭಗವಂತನಿಗೆ ಅರ್ಪಿಸುತ್ತಾನೆ. ವಿಗ್ರಹವನ್ನು ವಜ್ರ, ರತ್ನ, ಬಂಗಾರದ ಆಭರಣಗಳಿಂದ ಅಲಂಕರಿಸುತ್ತಾನೆ, ಸುಂದರ ವಸ್ತ್ರಗಳಿಂದ ಅಲಂಕರಿಸುತ್ತಾನೆ. ಇಲ್ಲಿ ಭಕ್ತ ತನ್ನ ಭಾವನೆ-ನಂಬಿಕೆಯಂತೆ ಭಗವಂತನಿಗೆ ಶ್ರೇಷ್ಠ ವಸ್ತುಗಳನ್ನು ಕೊಡುತ್ತಾನೆ. ಆದರೆ ಭಗವಂತನಿಗೆ ಬೆಳ್ಳಿ ಬಂಗಾರಗಳು ಮುಖ್ಯವಲ್ಲ, ಅವು ಭಕ್ತನಿಗೇ ಅಮೂಲ್ಯ. ಅವನು ಅವುಗಳಿಂದ ತನ್ನ ಇಷ್ಟವನ್ನು ಅಲಂಕರಿಸಿ ತಾನು ಸಂತೋಷಪಡುತ್ತಾನೆ. ಇಲ್ಲಿಯೂ ಭಕ್ತನ ಇಷ್ಟಪೂರ್ತಿ ಮತ್ತು ಸಂತೋಷವೇ ಮುಖ್ಯವಾಗಿದೆ.

ಉತ್ತಮ ಪೂಜೆಯಲ್ಲಿ ಇಷ್ಟದ ವಿಧಿ-ವಿಶೇಷದಂತೆ ಪೂಜೆಯನ್ನು ಮಾಡಬೇಕು. ಅಲ್ಲಿ ತನ್ನ ಇಷ್ಟ ನಡೆಯುವಂತಿಲ್ಲ. ಕಾಳೀ ಪೂಜೆಗೂ ಶಿವನ ಪೂಜೆಗೂ ವ್ಯತ್ಯಾಸವಿದೆ. ಶ್ರೀರಾಮಕೃಷ್ಣರ ನೈವೇದ್ಯಕ್ಕೆ ರವೆ ಪಾಯಿಸ ಅರ್ಪಿಸಬೇಕು. ಆರಂಭದಲ್ಲಿ ಸಾಧಕ

ಬೇಕೆನಿಸಿದರೆ ಶ್ರೀರಾಮಕೃಷ್ಣರನ್ನು ಅಲಂಕರಿಸಲಿ. ಆದರೆ ಭಕ್ತಿ ಗಾಢವಾದಂತೆ ಲೋಹವನ್ನೇ ಸ್ಪರ್ಶಿಸಲಾಗದ ಶ್ರೀರಾಮಕೃಷ್ಣರನ್ನು ಆಭರಣಗಳು ಮತ್ತು ಶ್ರೇಷ್ಠ ರೇಷ್ಮೆ ವಸ್ತ್ರಗಳಿಂದ ಅಲಂಕರಿಸುವುದು ಸರಿಯಲ್ಲ ಎಂದು ಭಕ್ತನಿಗೆ ಅನ್ನಿಸುತ್ತದೆ.

ಅತ್ಯುನ್ನತ ಹಂತದಲ್ಲಿ ಭಕ್ತ ಇಷ್ಟದೇವತೆಯ ಸಾನ್ನಿಧ್ಯವನ್ನು ಅನುಭವಿಸುತ್ತಾನೆ. ಅವನು ವಿಧಿ-ನಿಷೇಧಗಳನ್ನು ಮೀರಿ ಬೆಳೆಯುತ್ತಾನೆ. ಅವನ ಅಲ್ಪ ಇಚ್ಛೆಯು ಭಗವಂತನ ಇಚ್ಛೆಯಲ್ಲಿ ಲಯವಾಗುತ್ತದೆ. ಅವನ ಪೂಜೆಯೂ ಅನೌಪಚಾರಿಕವಾಗುತ್ತದೆ. ಶ್ರೀರಾಮಕೃಷ್ಣರ ಈ ಬಗೆಯ ಪೂಜೆಯನ್ನು ನೋಡಿ ಕಾಳೀ ದೇವಸ್ಥಾನದ ಜನ ಅವರನ್ನು ಹುಚ್ಚರೆಂದು ಬಗೆದರು.

ಭಕ್ತಿಯ ಸ್ಥಿತಿಯಲ್ಲಿ ಭಗವಂತನೇ ಭಕ್ತನಿಗೆ ವಶನಾಗುತ್ತಾನೆ. ಭಕ್ತಿಶಾಸ್ತ್ರಗಳಲ್ಲಿ ಇಂತಹ ಅನೇಕ ದೃಷ್ಟಾಂತಗಳು ಸಿಗುತ್ತವೆ. ಶ್ರೀರಾಮನು ಶಬರಿಯ ಭಕ್ತಿಗೆ ವಶನಾಗಿ ಅವಳ ಎಂಜಲು ಹಣ್ಣುಗಳನ್ನು ತಿನ್ನಬೇಕಾಯಿತು. ಆಗ ಭಕ್ತ ಭಗವಂತನಿಂದ ಏನನ್ನೂ ಬಯಸನು. ಅವನಿಗೆ ಯಾವ ತೊಂದರೆಯನ್ನೂ ಕೊಡನು. ಶ್ರೀರಾಮಕೃಷ್ಣರು ಇದನ್ನು ಒಂದು ದೃಷ್ಟಾಂತದೊಂದಿಗೆ ವಿವರಿಸುತ್ತಾರೆ. ಮೂವರು ವ್ಯಕ್ತಿಗಳು ಕಾಡಿನ ದಾರಿಯಾಗಿ ಹೋಗುತ್ತಿದ್ದರು. ಇದ್ದಕ್ಕಿದ್ದಂತೆ ಹುಲಿಯ ಗರ್ಜನೆ ಕೇಳಿಸಿತು. ಮೊದಲ ವ್ಯಕ್ತಿ, 'ಹುಲಿ ತನ್ನನ್ನು ತಿಂದುಹಾಕಿದರೆ' ಎಂದು ಹೆದರಿಬಿಟ್ಟನು. ಎರಡನೆಯವನು, 'ನಾವೇನೂ ಹೆದರಬೇಕಿಲ್ಲ. ಭಗವಂತನನ್ನು ಕರೆಯೋಣ. ಅವನು ನಮ್ಮನ್ನು ರಕ್ಷಿಸುತ್ತಾನೆ' ಎಂದನು. ಮೂರನೆಯವನು 'ಈ ವಿಷಯದಲ್ಲಿ ಭಗವಂತನಿಗೆ ತೊಂದರೆ ಕೊಡಬೇಕಿಲ್ಲ. ನಾವೇ ಒಂದು ಮರವನ್ನು ಹತ್ತೋಣ' ಎಂದನು. ಇವರಲ್ಲಿ ಮೂರನೆಯವನು ನಿಜವಾದ ಭಕ್ತ ಎನ್ನುತ್ತಾರೆ ಶ್ರೀ ರಾಮಕೃಷ್ಣರು.

### ಭಕ್ತಿಸಾಧನೆಯ ಮೆಟ್ಟಿಲುಗಳು

#### ೧) ಸ್ವಧರ್ಮ ಪಾಲನೆ ಮತ್ತು ಸಂಯಮ:

ಭಕ್ತಿ ಎಂದು ಹೇಳಿದಾಗ ಅಲ್ಲಿ ನಿಸ್ವಾರ್ಥ ಪ್ರೇಮ ಮತ್ತು ನಂಬಿಕೆ ಇರಬೇಕೆಂದು ಅರ್ಥ. ನಿಸ್ವಾರ್ಥತೆ ಬಹಳ ಕಠಿಣವಾದುದು. ನಿಸ್ವಾರ್ಥನಾಗದೆ ಭಗವಂತನಲ್ಲಿ ದೃಢನಂಬಿಕೆ ಬರದು, ಪ್ರೇಮವೂ ಬರದು. ಆದ್ದರಿಂದ ಸ್ವಧರ್ಮ ಸಾರಿ ಹೇಳಿದ ಕರ್ತವ್ಯ ಕರ್ಮಗಳ ಪಾಲನೆಗೆ ಅಷ್ಟು ಮಹತ್ವವನ್ನು ಕೊಡಲಾಗಿದೆ. ಜೊತೆಯಲ್ಲಿ ಮಾನಸಿಕ ಸಂಯಮ ಮತ್ತು ಇಂದ್ರಿಯ ನಿಗ್ರಹವೂ ಅನಿವಾರ್ಯ.

#### ೨) ತ್ಯಾಗ ಮತ್ತು ಸೇವೆ

ಭಗವಂತನನ್ನು ಪ್ರೀತಿಸುವ ಮೊದಲ ನಾವು ನಮ್ಮ ಪ್ರಾಪಂಚಿಕ ಸಂಬಂಧಗಳನ್ನು ಪವಿತ್ರ ಹಾಗೂ ನಿಸ್ವಾರ್ಥಗೊಳಿಸಿಕೊಳ್ಳಬೇಕು. ನಾವು ಸದಾ ಇನ್ನೊಬ್ಬರ ಸೇವೆಯನ್ನು ಮಾಡಬೇಕು, ದಾನವನ್ನು ಮಾಡಬೇಕು. ನಾವು ಯಾವಾಗಲೂ ಉತ್ತಮ ವಸ್ತುವನ್ನು ನಾವು ಇಟ್ಟುಕೊಂಡು ಸಾಮಾನ್ಯ ವಸ್ತುವನ್ನು ಇನ್ನೊಬ್ಬರಿಗೆ ಕೊಡಬಯಸುತ್ತೇವೆ. ಜೀವಿ ತನ್ನ ಸುಖವನ್ನೇ ಅರಸುತ್ತಾನೆ. ಭಕ್ತಿಮಾರ್ಗದ ಮೊದಲ ಸಾಧನೆ ನಿಷ್ಕಾಮ ಸೇವೆ. ತ್ಯಾಗ ಮತ್ತು ಸೇವೆಯೇ ಭಕ್ತಿಯ ಬುನಾದಿ. ಅದರಲ್ಲಿ ನೆಲೆನಿಂತಲ್ಲದೆ ಭಕ್ತಿಯ ಮಾತೇ ಇಲ್ಲ. ನಾವು ಅತೃಪ್ತರಾಗಿ ಜಗತ್ತಿನಲ್ಲಿ ಗುದ್ದಾಡುತ್ತಿರುತ್ತೇವೆ ಮತ್ತು ಕ್ಷುದ್ರ ಪ್ರಾಪಂಚಿಕ ಆಟಿಕೆಗಳಲ್ಲಿ ಮನಸ್ಸನ್ನು ರಮಿಸುವ ಪ್ರಯತ್ನವನ್ನು ಮಾಡುತ್ತೇವೆ. ನಿಸ್ವಾರ್ಥ ಪ್ರೇಮವಿಲ್ಲದೆ ಜೀವಕ್ಕೆ ಎಂದಿಗೂ ತೃಪ್ತಿ ಸಿಗದು ಎಂಬ ಕಲ್ಪನೆ ನಮಗಿಲ್ಲ. ಕೊಡುವುದರಿಂದ ಮಾತ್ರ ಈ ಪ್ರೇಮವನ್ನು ಪಡೆಯಬಹುದು. ಭಕ್ತನು ಮೊದಲು ತನ್ನ ಪ್ರಾಪಂಚಿಕ ಆಸೆ-ಆಕಾಂಕ್ಷೆಗಳನ್ನು ತೊರೆಯಬೇಕು. ಭಗವಂತನನ್ನು ಮಾತ್ರ ಅವನು ಆಶ್ರಯಿಸಬೇಕು.

#### ೩) ಸಕಾಮ ಭಕ್ತಿ

ನಾವು ಜಗತ್ತಿನ ಜನರ ಬಳಿ ಬೇಡುವುದಕ್ಕಿಂತ ಭಗವಂತನನ್ನೇ ಬೇಡಬೇಕು. ಸಕಾಮ ಭಕ್ತಿ ತಪ್ಪಲ್ಲ. ಭಗವಂತನೇ ಭಕ್ತನನ್ನು ಆರ್ತ, ಅರ್ಥಾರ್ಥಿ, ಜಿಜ್ಞಾಸು ಮತು ಜ್ಞಾನಿ ಎಂದು ವಿಂಗಡಿಸಿದ್ದಾನೆ ಮತ್ತು ಎಲ್ಲರೂ ಉದಾರರೇ ಎಂದು ಹೇಳಿರುವನು. ಆದರೆ ಭಗವಂತನ ಬಳಿ ಪ್ರಾಪಂಚಿಕ ವಸ್ತುಗಳನ್ನು ಬೇಡುವುದು, ಚಕ್ರವರ್ತಿಯ ಬಳಿಸಾರಿ ನಾಲ್ಕು ಬದನೆಕಾಯಿ ಕೇಳಿದ ಹಾಗೆ ಎಂದು ತಿಳಿದುಕೊಂಡಿರಬೇಕು. ಭಗವಂತನನ್ನು ಜ್ಞಾನ, ಭಕ್ತಿ, ವಿವೇಕ, ವೈರಾಗ್ಯಗಳಿಗಾಗಿ ಮಾತ್ರವೇ ಪ್ರಾರ್ಥಿಸಿಕೊಳ್ಳಬೇಕು.

#### ೪) ನಿಷ್ಕಾಮ ವೈಧೀ ಭಕ್ತಿ

ಭಗವಂತನಲ್ಲಿ ಪ್ರೀತಿ ಇನ್ನೂ ಬೆಳೆದಿಲ್ಲದಾಗ ವಿಧಿವಿಧಾನಗಳನ್ನು ಅನುಷ್ಠಾನ ಮಾಡಬೇಕಾಗುತ್ತದೆ. ಗಂಧವನ್ನು ತೇಯ್ದಾಗ ಮತ್ತು ಹೂವನ್ನು ಅಲುಗಿಸಿದಾಗ ಮಾತ್ರ ಅದರಿಂದ ಸುವಾಸನೆ ಹೊರಹೊಮ್ಮುವಂತೆ ಪೂಜೆ, ಪ್ರಾರ್ಥನೆ, ಪಾರಾಯಣ, ಸ್ತೋತ್ರ ಪಠಣ ಮಾಡುತ್ತ ಅವನಲ್ಲಿ ಪ್ರೀತಿ ಅಧಿಕವಾಗುತ್ತದೆ. ದಿನಕ್ಕೆರಡು ಬಾರಿ ಕುಳಿತುಕೊಂಡು ನಿರ್ಧಾರಿತ ಸಂಖ್ಯೆಯಲ್ಲಿ ಜಪವನ್ನು ಮಾಡುವುದು ಒಂದು ವಿಧಿ. ಈ ಬಗೆಯ ವ್ರತ ನಿಯಮವು ತನ್ನ ತಾನು ಶಿಸ್ತಿಗೆ ಒಳಪಡಿಸಿಕೊಳ್ಳಲು ಮತ್ತು ತನ್ನ ಸ್ವಾರ್ಥ ಇಚ್ಛೆಯನ್ನು ತ್ಯಜಿಸಲು ಸಹಾಯಕವಾಗುತ್ತದೆ.

#### ೫) ಸೇವ್ಯ -ಸೇವಕ ಭಾವ

ಕುಟುಂಬದ ಸದಸ್ಯರೊಂದಿಗಿರುವ ಸೇವಾಭಾವವನ್ನು ಭಗವಂತನ ಕಡೆಗೂ ತಿರುಗಿಸಿಕೊಳ್ಳಬೇಕು. ಭಗವಂತ ಸೇವ್ಯ, ಪೂಜ್ಯ, ಸ್ವಾಮಿ; ನಾನು ಅವನ ಸೇವಕ - ಈ ಭಾವ ಶುದ್ಧವಾದುದು, ಇಲ್ಲಿ ಅಹಂಕಾರವಿರದು, ದೀನಭಾವವಿರುತ್ತದೆ. ಈ ಭಾವ ಬಲವಾಗುತ್ತ ಭಗವಂತ ನನ್ನವನು ಎಂಬ ಆತ್ಮೀಯತೆ ಬೆಳೆಯುತ್ತದೆ. ❁